# ನಿಜವಾದ ಸ್ನೇಹಿತ ಯಾರು?

**ಶಾ**ಲೆಯ ಕೊನೆಯ ಗಂಟೆ ಬಾರಿಸಿತು. ಸುಧೀರ, ರಾಮಣ್ಣ, ಅರುಣ, ಶಿವಸ್ವಾಮಿ ಮತ್ತಿತರ ವಿದ್ಯಾರ್ಥಿಗಳು ಕ್ರಿಕೆಟ್ ಅಭ್ಯಾಸಕ್ಕಾಗಿ ಆಟದ ಮೈದಾನದಲ್ಲಿ ಸೇರಿದ್ದಾರೆ. ಅವರಿಗೆ ಮುಂದಿನ ವಾರ ಒಂದು ಮುಖ್ಯವಾದ ಕ್ರಿಕೆಟ್ ಮ್ಯಾಚ್ ಇತ್ತು.

ಆದರೆ ಸುಧೀರನಿಗೆ ತುಂಬ ಬೇಜಾರಾಗಿದೆ. ಅವನ ಆಪ್ತ ಗೆಳೆಯನಾದ ಮಹೇಶ ಇನ್ನೂ ಬಂದಿಲ್ಲ. ಮಹೇಶನನ್ನು ನೆನ್ನೆ ಬೆಳಗ್ಗಿನಿಂದ ಅವನು ಕಂಡೇ ಇಲ್ಲ. ಸ್ವಲ್ಪ ಸಮಯದ ನಂತರ ಮಹೇಶನು ನಿಧಾನವಾಗಿ ನಡೆದುಕೊಂಡು, ಆಟದ ಮೈದಾನಕ್ಕೆ ಬಂದನು. ಮಹೇಶನ ಮುಖದಲ್ಲಿಯೂ ಬೇಸರ. ಬಂದವನೇ ಸುಧೀರನಿಗೆ ಹೇಳಿದನು: "ನೀನು ಹೀಗೆ ಮಾಡುತ್ತೀ ಎಂದು ಕನಸಿನಲ್ಲಿಯೂ ನೆನೆಸಿರಲಿಲ್ಲ."

ಸುಧೀರನಿಗೆ ಆಶ್ಚರ್ಯ. "ನನ್ನ ಮೇಲೆ ಏಕೆ ನಿನಗೆ ಇಷ್ಟೊಂದು ಕೋಪ?" ಎಂದು ಕೇಳಿದನು. "ನೆನ್ನೆ ಭಾನುವಾರ ಮಧ್ಯಾಹ್ನ ಎರಡು ಗಂಟೆಗೆ ಕ್ರಿಕೆಟ್ ಮ್ಯಾಚಿಗೆ ಬಾ ಎಂದು ಫೋನ್ ಮಾಡಿ ಹೇಳಿದ್ದು ನೀನೇ ಅಲ್ಲವಾ? ನಾನು ನೆನ್ನೆ ಕಾರ್ಪೋರೇಷನ್ ಮೈದಾನಕ್ಕೆ ಬಂದು ಕಾದು, ಕಾದು ಸುಸ್ತಾಗಿ, ನಿನ್ನ ಮನೆಗೆ ಬಂದರೆ, ಅದಕ್ಕೆ ಬೀಗ ಹಾಕಿತ್ತು. ಏಕೆ ಹೀಗೆ ಮಾಡಿದೆ?" ಎಂದನು ಮಹೇಶ. ಸುಧೀರ ಆಗ ಹೇಳಿದ, "ನಾನು ನೆನ್ನೆ ಬೆಳಗ್ಗೆಯೇ ನನ್ನ ಅಜ್ಜಿ ಮನೆಗೆ ಹೋದವನು ರಾತ್ರಿಯೇ ಬಂದೆ. ನಿನಗೆ ನಾನು ಫೋನ್ ಮಾಡಿಯೇ ಇಲ್ಲ." ಹೀಗೆ ಸ್ನೇಹಿತರು ಪರಸ್ಪರ ವಾಗ್ವಾದದಲ್ಲಿ ತೊಡಗಿದ್ದಾಗ, ರಾಮಣ್ಣ ಗಹಗಹಿಸಿ ನಗುತ್ತಿದುದ್ದನ್ನು ಕೇಳಿಸಿಕೊಂಡರು. ಆಗ ಅವರಿಬ್ಬರಿಗೂ ಗೊತ್ತಾಯಿತು, ಸುಧೀರನ ಧ್ವನಿಯನ್ನು ಅನುಕರಿಸಿ, ಮಹೇಶನಿಗೆ ಫೋನ್ ಮಾಡಿದವನು ಇವನೇ ಎಂದು. ಇಬ್ಬರೂ ಕೋಪಗೊಂಡು ಅವನನ್ನು ಹೊಡೆಯಲು ಹೋದರು.

ಅದೇ ಸಮಯಕ್ಕೆ ಶಿಕ್ಷಕ ಶ್ರೀಧರ್ ಹೆಗಡೆ ಹೊರಗೆ ಬಂದು, ಜಗಳ ಬಿಡಿಸಿದರು. ಎಲ್ಲವನ್ನೂ ಕೇಳಿಸಿಕೊಂಡು, ಕಡೆಯಲ್ಲಿ ರಾಮಣ್ಣನಿಗೆ ಹೇಳಿದರು, "ನೋಡು, ನೀನು ತಮಾಷೆಗೆಂದು ಮಾಡಿದ್ದು ಬೇರೆಯವರಿಗೆ ಎಷ್ಟೊಂದು ತೊಂದರೆ ಉಂಟು ಮಾಡಿತು! ನೀನು ನಿನ್ನ ಸ್ನೇಹಿತರಿಗೆ ಸುಳ್ಳು ಹೇಳಿದರೆ, ಅವರ ಸ್ನೇಹವನ್ನು ಕಳೆದುಕೊಳ್ಳುವೆ." ಆಗ ಅಲ್ಲಿ ನೆರೆದಿದ್ದ ಹುಡುಗರೆಲ್ಲ ಹೇಳಿದರು, "ಹೌದು ಸಾರ್, ಅದಕ್ಕೇ ಅವನಿಗೆ ಯಾವ ಸ್ನೇಹಿತರೂ ಇಲ್ಲ. ಅದಲ್ಲದೆ, ಅವನು ಮೇಷ್ಟ್ರ ಹತ್ತಿರವೂ ಕೀಟಲೆ ಮಾಡುತ್ತಾನೆ." ಆಗ ಹೆಗಡೆ ಮಾಸ್ತರರು ಹೇಳಿದರು, "ರಾಮಣ್ಣ, ನಿನಗೆ ಒಬ್ಬರಾದರೂ ನಿಜವಾದ ಸ್ನೇಹಿತರು ಇಲ್ಲದಿದ್ದರೆ, ನಿನ್ನ ಜೀವನ ಬರಡಾಗಿ ಹೋಗಿಬಿಡುತ್ತದೆ. ಹುಡುಗರಾದ ನೀವೆಲ್ಲ ಉತ್ತಮ ಸ್ನೇಹಿತರನ್ನು ಪಡೆದುಕೊಳ್ಳುವುದರ ಮಹತ್ವವನ್ನು ತಿಳಿದುಕೊಳ್ಳಬೇಕು. ಒಬ್ಬ ಒಳ್ಳೆಯ ಸ್ನೇಹಿತನು ಭಗವಂತನ ಕೊಡುಗೆಯೆ ಸರಿ ಎಂದು ತಿಳಿದುಕೋ. ಅಂತಹ ಸ್ನೇಹಿತನು ಜೀವನದಲ್ಲಿ ಆನಂದವನ್ನು ತರುತ್ತಾನೆ. ಹಣ, ಅಧಿಕಾರ – ಇದಾವುದೂ ಸ್ನೇಹದಲ್ಲಿ ಭೇದಭಾವವನ್ನು ಮಾಡಲಾರವು. ಭಗವಾನ್ ಶ್ರೀಕೃಷ್ಣ ಮತ್ತು ಸುದಾಮ ಅಂಥ ಸ್ನೇಹಕ್ಕೆ ಉತ್ತಮ ಉದಾಹರಣೆಗಳಾಗಿದ್ದಾರೆ. ಯಾರಿಗಾದರೂ ಅವರ ಕತೆ ಗೊತ್ತೇನು?"

ಎಲ್ಲರೂ ಅವರ ಒಂದೊಂದು ಕೈ ಎತ್ತಿದರೆ, ಅರುಣ ತನ್ನ ಎರಡೂ ಕೈಗಳನ್ನು ಎತ್ತಿದ! ಹೆಗಡೆ ಮಾಸ್ತರರಿಗೆ ನಗು ಬಂತು. "ಸರಿ ಸರಿ. ಅರುಣ್, ನೀನೀಗ ಆ ಕತೆ ಹೇಳು. ಅದಕ್ಕಿಂತ ಮೊದಲು ನಾವೆಲ್ಲ ಆ ಮರದ ಕೆಳಗೆ ಕುಳಿತುಕೊಳ್ಳೋಣ, ಬನ್ನಿ" ಎಂದರು. ಎಲ್ಲರೂ ಮರದ ನೆರಳಿನಲ್ಲಿ ಕುಳಿತು ಅರುಣ ಹೇಳಿದ ಕತೆಯನ್ನು ಕೇಳಲಾರಂಭಿಸಿದರು.

ಅರುಣ ಮಧ್ಯದಲ್ಲಿ ಕುಳಿತು ಕಥೆಯನ್ನು ಹೇಳಲು ಆರಂಭಿಸಿದನು: ಶ್ರೀಕೃಷ್ಣ ಮತ್ತು ಸುದಾಮ ಇಬ್ಬರೂ ತಮ್ಮ ಬಾಲ್ಯದಲ್ಲಿ ಸಾಂದೀಪಿನಿ ಗುರುಗಳ ಗುರುಕುಲದಲ್ಲಿ ವ್ಯಾಸಂಗ ಮಾಡಿದರು. ಇಬ್ಬರಲ್ಲೂ ಪರಸ್ಪರ ಆತ್ಮೀಯ ಗೆಳೆತನ; ಯಾವಾಗಲೂ ಒಟ್ಟಿಗೆ ಇರುತ್ತಿದ್ದರು. ವ್ಯಾಸಂಗವನ್ನು ಮುಗಿಸಿ ಇಬ್ಬರೂ ಒಟ್ಟಿಗೆ ಗುರುಕುಲದಿಂದ ತೆರಳಿದರು. ಸುದಾಮ ತನ್ನ ಹಳ್ಳಿಗೆ ಮರಳಿ ಸರಳ ಜೀವನ ನಡೆಸತೊಡಗಿದನು. ಇತ್ತ ದ್ವಾರಕೆಯಲ್ಲಿ ಶ್ರೀಕೃಷ್ಣನು ಯಾದವರಿಗೆಲ್ಲ ಸಮರ್ಥ ರಾಜನಾದನು; ಭವ್ಯವಾದ ಅರಮನೆಯಲ್ಲಿ ವಾಸಿಸತೊಡಗಿದನು.

ಸುದಾಮನದು ಬಲು ದೊಡ್ಡ ಕುಟುಂಬ. ಆದರೆ ತುಂಬಾ ಬಡತನ. ಎಷ್ಟೋ ದಿನಗಳು ಮನೆಯಲ್ಲಿ ತಿನ್ನಲು ಏನೂ ಇರುತ್ತಿರಲಿಲ್ಲ. ಶ್ರೀಕೃಷ್ಣನು ತನ್ನ ಗಂಡನ ಆತ್ಮೀಯ ಗೆಳೆಯ ಎಂಬುದು ಸುದಾಮನ ಪತ್ನಿಗೆ ಗೊತ್ತಿತ್ತು. ಶ್ರೀಕೃಷ್ಣನಿಂದ ಸಹಾಯವನ್ನು ಪಡೆಯುವಂತೆ ಸುದಾಮನನ್ನು ಅವಳು ಮತ್ತೆಮತ್ತೆ ಒತ್ತಾಯಿಸುತ್ತಿದ್ದಳು.

ಅಂತೂ ಕೊನೆಗೆ ದ್ವಾರಕೆಗೆ ಹೋಗಲು ಸುದಾಮ ಒಪ್ಪಿದ. "ಹೌದು, ನನ್ನ ಹಳೆಯ ಪ್ರಿಯಮಿತ್ರನನ್ನು ಭೇಟಿಯಾಗುವುದೆಂದರೆ ನನಗೂ ತುಂಬಾ ಸಂತೋಷ. ನಾನು ಶ್ರೀಕೃಷ್ಣನಲ್ಲಿಗೆ ಹೋಗಿ ಸಹಾಯವನ್ನು ಪಡೆಯುತ್ತೇನೆ. ಇನ್ನೊಂದು ವಿಷಯ; ನಾನು ನನ್ನ ಪ್ರಿಯಮಿತ್ರನನ್ನು ಬಹಳ ವರ್ಷಗಳ ಬಳಿಕ ನೋಡುತ್ತಿದ್ದೇನೆ. ಅವನಿಗೆ ಏನಾದರೂ ಉಡುಗೊರೆಯನ್ನು ತೆಗೆದುಕೊಂಡು ಹೋಗಬೇಕು. ಅವನಿಗೆ ನೀಡಲು ಏನನ್ನಾದರೂ ಕೊಡು" ಎಂದನು. ಆದರೆ ಮನೆಯಲ್ಲಿ ಏನೂ ಇರಲಿಲ್ಲ. ಸುದಾಮನ ಪತ್ನಿಯು ಪಕ್ಕದ ಮನೆಗೆ ಹೋಗಿ ಸ್ವಲ್ಪ ಅವಲಕ್ಕಿಯನ್ನು ಕೈಗಡ ತೆಗೆದುಕೊಂಡು ಬಂದಳು. ತಂದ ಅವಲಕ್ಕಿಯನ್ನು ಸುದಾಮನ ಬಟ್ಟೆಯ ಅಂಚಿಗೆ ಕಟ್ಟಿದಳು.

ದೀರ್ಘ ಪ್ರಯಾಣ ಮಾಡಿ ಬಳಲಿದ ಸುದಾಮನು ಶ್ರೀಕೃಷ್ಣನ ಅರಮನೆಯನ್ನು ತಲುಪಿದನು. ಸುದಾಮನು ಬಂದ ವಿಚಾರವನ್ನು ಸೇವಕನೊಬ್ಬನು ಶ್ರೀಕೃಷ್ಣನಿಗೆ ತಿಳಿಸುತ್ತಾ, "ಪ್ರಭೂ, ಒಬ್ಬ ಬಡ ಬ್ರಾಹ್ಮಣನು ನಿಮ್ಮನ್ನು ನೋಡಲು ಬಂದಿದ್ದಾನೆ. ಅವನು ನಿಮ್ಮ ಹಳೆಯ ಮಿತ್ರನೆಂದು ಹೇಳಿಕೊಳ್ಳುತ್ತಿದ್ದಾನೆ" ಎಂದನು.

ಇದನ್ನು ಕೇಳಿದ ಕೂಡಲೇ ಶ್ರೀಕೃಷ್ಣನು ಸಂತೋಷದಿಂದ ಬಾಗಿಲ ತನಕ ಓಡಿಬಂದು ತನ್ನ ಬಾಲ್ಯದ ಪ್ರಿಯಮಿತ್ರನನ್ನು ಬಾಚಿ

ತಬ್ಬಿಕೊಂಡನು. ಅವನನ್ನು ಅರಮನೆಯೊಳಕ್ಕೆ ಕರೆದು ಕೊಂಡು ಹೋಗಿ ತನ್ನ ಸಿಂಹಾಸನದ ಮೇಲೆ ಕುಳ್ಳಿರಿಸಿದನು. ಕೊಳೆಬಟ್ಟೆಗಳನ್ನುಟ್ಟ ಬಡ ಬ್ರಾಹ್ಮಣನೊಬ್ಬನನ್ನು ಶ್ರೀಕೃಷ್ಣನು ಅಷ್ಟೊಂದು ಪ್ರೀತಿಯಿಂದ ಸ್ವಾಗತಿಸಿ ಸತ್ಕರಿಸಿದ್ದನ್ನು ನೋಡಿ, ಅಲ್ಲಿದ್ದವರೆಲ್ಲರೂ ಆಶ್ಚರ್ಯಚಕಿತರಾದರು.



ಇಬ್ಬರೂ ಪರಸ್ಪರ ಕುಶಲ ವಿಚಾರಿಸಿಕೊಂಡರು. ಸ್ವಲ್ಪ ಸಮಯದ ನಂತರ ಶ್ರೀಕೃಷ್ಣನು ಸುದಾಮನ ಬಟ್ಟೆಯ ಅಂಚಿಗೆ ಕಟ್ಟಿದ್ದ ಗಂಟನ್ನು ಗಮನಿಸಿದನು. “ಪ್ರಿಯಮಿತ್ರ, ನನಗಾಗಿ ಏನನ್ನು ತಂದಿರುವೆ?” ಎಂದು ಕೇಳಿದನು. ಸುದಾಮನಿಗೆ ತಾನು ತಂದ ಅವಲಕ್ಕಿಯನ್ನು ನೀಡಲು ನಾಚಿಕೆಯಾಯಿತು. “ನನ್ನ ಮಿತ್ರನು ಇಷ್ಟು ವೈಭವದಲ್ಲಿ ವಾಸಿಸುತ್ತಿದ್ದಾನೆ. ಅವನಿಗೆ ಈ ಸಾಮಾನ್ಯ ತಿಂಡಿಯನ್ನು ನಾನು ಹೇಗೆ ತಾನೆ ಕೊಡಲಿ?” ಎಂದು ಮನಸ್ಸಿನಲ್ಲೇ ಯೋಚಿಸಿದನು.

ಆದರೆ ಶ್ರೀಕೃಷ್ಣ ಅವನನ್ನು ಮತ್ತೆ ಮತ್ತೆ ಕೇಳಿದನು, “ಇದೇನು ಸುದಾಮ? ನನಗೆ ಕೊಡುವುದಿಲ್ಲವೆ?” ಅಂತೂ ಕೊನೆಗೆ ಬಹಳ ಹಿಂಜರಿಯುತ್ತಾ ಸುದಾಮನು ಅವಲಕ್ಕಿಯನ್ನು ಕೊಟ್ಟನು. ಶ್ರೀಕೃಷ್ಣನಿಗೆ ಅತ್ಯಾನಂದವಾಯಿತು. “ಆಹಾ! ಇದು ನನಗೆ ಅತ್ಯಂತ ಇಷ್ಟವಾದ ತಿನಿಸು” ಎನ್ನುತ್ತಾ ಸಂತೋಷದಿಂದ ತಿನ್ನತೊಡಗಿದನು. ಅಲ್ಲದೆ ಅದನ್ನು ತನ್ನ ಪತ್ನಿಯರಿಗೂ ಕೊಟ್ಟು, “ನನ್ನ ಮಿತ್ರನು ಮುಗ್ಧ ಪ್ರೀತಿಯಿಂದ ನೀಡಿದ ಈ ಅವಲಕ್ಕಿ ಅತ್ಯಂತ ರುಚಿಕರವಾಗಿದೆ. ಬನ್ನಿ, ನೀವೆಲ್ಲರೂ ಇದರ ರುಚಿಯನ್ನು ಸವಿಯಿರಿ” ಎಂದನು.

ಇಬ್ಬರೂ ಸಾಂದೀಪಿನಿ ಆಶ್ರಮದಲ್ಲಿನ ತಮ್ಮ ವಿದ್ಯಾರ್ಥಿ ಜೀವನದ ಕುರಿತು ಮಾತನಾಡತೊಡಗಿದರು. ಹೀಗೆ ಹಲವು ದಿನಗಳು ಆನಂದದಿಂದ ಕಳೆಯಿತು. ನಂತರ ಸುದಾಮನು ತನ್ನ ಹಳ್ಳಿಗೆ ಮರಳಿ ಹೊರಟನು. ಸ್ವಲ್ಪ ದೂರ ಪ್ರಯಾಣ ಮಾಡಿದನಂತರ, ತಾನು ಶ್ರೀಕೃಷ್ಣನಿಂದ ಸಹಾಯ ಕೇಳಲು ಮರೆತಿರುವುದು ಸುದಾಮನ ನೆನಪಿಗೆ ಬಂತು! ಆದರೆ ಶ್ರೀಕೃಷ್ಣನ ಪ್ರೀತಿ, ವಿಶ್ವಾಸಗಳನ್ನು ಪಡೆದ ಅವನ ಹೃದಯ ಆನಂದದಿಂದ ತುಂಬಿಹೋಗಿತ್ತು. ಮತ್ತೆ ಸಹಾಯ ಕೇಳಲು ಹೋಗಬೇಕೆಂದು ಅವನಿಗೆ ಅನ್ನಿಸಲೇ ಇಲ್ಲ.

ಸುದಾಮನು ತನ್ನ ಹಳ್ಳಿಯನ್ನು ತಲುಪಿದನು. ಆದರೆ ತನ್ನ ಮನೆಯಿರುವ ಸ್ಥಳಕ್ಕೆ ಬಂದಾಗ, ಅವನ ಹಳೆಯ ಮನೆ ಕಾಣಿಸಲೇ ಇಲ್ಲ. ಆ ಜಾಗದಲ್ಲಿ ಒಂದು ದೊಡ್ಡ ಅರಮನೆ ಇತ್ತು. ಸುದಾಮನು ತಾನು ದಾರಿ ತಪ್ಪಿರಬೇಕೆಂದು ಭಾವಿಸಿದನು. ಇನ್ನೇನು ಅಲ್ಲಿಂದ ಹೊರಡಬೇಕು ಎಂದಿರುವಾಗ, ತನ್ನ ಹೆಂಡತಿ ಮಕ್ಕಳು ತನ್ನನ್ನು ಸ್ವಾಗತಿಸಲು ಆ ಅರಮನೆಯಿಂದ ಹೊರಗೆ ಬರುತ್ತಿರುವುದನ್ನು ನೋಡಿದನು. ಅವನ ಆಶ್ಚರ್ಯಕ್ಕೆ ಪಾರವೇ ಇಲ್ಲ! ಅವರೆಲ್ಲರೂ ಉತ್ತಮವಾದ ಬಟ್ಟೆಯನ್ನೂ ಚಿನ್ನದ ಆಭರಣಗಳನ್ನೂ ಧರಿಸಿದ್ದರು. ಆಗ ಸುದಾಮನಿಗೆ, ತನ್ನ ಕಷ್ಟವನ್ನು ತಿಳಿದ ಶ್ರೀಕೃಷ್ಣನು ತನಗೆ ಹೇಳದೆ ಈ ಎಲ್ಲಾ ವ್ಯವಸ್ಥೆ ಮಾಡಿದ್ದಾನೆಂದು ಅರಿವಾಯಿತು. ಕೃತಜ್ಞತೆಯಿಂದ ಅವನ ಕಣ್ಣಲ್ಲಿ ನೀರು ಬಂತು.

“ತುಂಬಾ ಚೆನ್ನಾಗಿದೆ ಅರುಣ್, ನೀನು ಕಥೆಯನ್ನು ಬಹಳ ಸುಂದರವಾಗಿ ಹೇಳಿದೆ” ಎಂದು ಹೆಗಡೆ ಮಾಸ್ತರರು ಹೊಗಳಿದರು. ಅವರು ಹೇಳಿದರು, “ ಮಹಾತ್ಮರ ಸ್ನೇಹ ಯಾವಾಗಲೂ ಪ್ರಾಮಾಣಿಕವಾಗಿರುತ್ತದೆ. ಅವರ ಬಾಂಧವ್ಯವನ್ನು ಜಗತ್ತಿನ ಯಾವ ಸಂಗತಿಯೂ ಕೆಡಿಸಲು ಸಾಧ್ಯವಿಲ್ಲ. ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ.”

ಒಮ್ಮೆ ಸ್ವಾಮಿ ವಿವೇಕಾನಂದರು ಲಾಹೋರಿಗೆ ಹೋದರು. ಅಲ್ಲಿ ಅವರ ಬಾಲ್ಯದ ಗೆಳೆಯ ಮೋತೀಲಾಲ ಬೋಸರು ಅವರನ್ನು ನೋಡಲು ಬಂದರು. ಮೋತೀಲಾಲರು ಒಂದು ದೊಡ್ಡ ಸರ್ಕಸ್ ಕಂಪೆನಿಯ ಮಾಲಿಕರಾಗಿದ್ದರು. ಅವರು ಈಗ ಸ್ವಾಮಿ ವಿವೇಕಾನಂದರೆಂದು ಪ್ರಸಿದ್ಧರಾಗಿರುವ ತನ್ನ ಹಳೆಯ ಸ್ನೇಹಿತ ನರೇಂದ್ರನಾಥ ದತ್ತರನ್ನು ಭೇಟಿಯಾಗಲು ತುಂಬಾ ಉತ್ಸುಕರಾಗಿದ್ದರು. ಆದರೆ ಮೋತೀಲಾಲರು ಒಳಗೆ ಬಂದು ನೋಡುತ್ತಾರೆ, ಸ್ವಾಮೀಜಿಯವರಿಗೆ ನೂರಾರು ಜನ ಭಕ್ತಿಪೂರ್ವಕವಾಗಿ ನಮಸ್ಕರಿಸುತ್ತಿದ್ದಾರೆ. ಇದನ್ನು ನೋಡಿ ಮೋತೀಲಾಲರಿಗೆ, ತಾನು ತನ್ನ ಸ್ನೇಹಿತನೆದುರಲ್ಲಿ ಹೇಗೆ ವರ್ತಿಸಬೇಕೆಂಬ ಬಗ್ಗೆ ಗೊಂದಲ ಆರಂಭವಾಯಿತು. ಅವರು ಸ್ವಾಮೀಜಿಯವರಿದ್ದಲ್ಲಿಗೆ ಹೋಗಿ ಕೇಳಿದರು, “ನಾನು ನಿಮ್ಮನ್ನು ಈಗ ಹೇಗೆ ಸಂಬೋಧಿಸಲಿ? ನರೇನ್ ಅಂತ ಹೇಳಲೋ ಅಥವಾ ಸ್ವಾಮೀಜಿ ಎನ್ನಲೋ?” ಇದನ್ನು ಕೇಳಿ ಸ್ವಾಮೀಜಿಯವರಿಗೆ ನಗು ತಡೆಯಲಾಗಲಿಲ್ಲ. ಅವರು ಹೇಳಿದರು, “ನಿನಗೇನು ಹುಚ್ಚೇ? ಪ್ರಿಯ ಮೋತಿ, ಯಾವುದೂ ಬದಲಾಗಿಲ್ಲ. ನೀನು ಅದೇ ಮೋತಿ, ನಾನು ಅದೇ ನರೇನ್.” ಸ್ವಾಮೀಜಿ ಈ ಮಾತುಗಳನ್ನು ಎಷ್ಟು ಪ್ರೀತಿ ಮತ್ತು ಸಲುಗೆಯಿಂದ ಹೇಳಿದರೆಂದರೆ, ಮೋತೀಲಾಲರು ಇದನ್ನು ಕೇಳಿ ವಿಚಲಿತರಾದರು. ತನ್ನ ಬಾಲ್ಯದ ಸ್ನೇಹಿತನೊಂದಿಗೆ ಹಿಂದಿನ ಸಲುಗೆಯಿಂದ ಮಾತನಾಡತೊಡಗಿದರು. *(ಮುಂದುವರಿಯುವುದು)*

(**ಕೃಪೆ:** *The Guiding Light*, Pub: Ramakrishna Mission, Belur Math, Howrah, WB 711 202 )

(**ಅನುವಾದ:** **ಬ್ರಹ್ಮಚಾರಿ ಬಾಲಸುಬ್ರಹ್ಮಣ್ಯ**)